ಚಲನಚಿತ್ರಕ್ಕೆ ಸಂಭಾಷಣೆ ಬೇಕೇ ಬೇಕೆಂದಿಲ್ಲ ಎನ್ನುವ ಸಿದ್ಧಾಂತವನ್ನು ರಷ್ಯಾ ಫಿಲ್ಮ್ ಜಗತ್ತು 1952 ರಷ್ಟು ಹಿಂದೆಯೇ ಪ್ರಸ್ತುತಗೊಳಿಸಿ ಚಿತ್ರವನ್ನು ತಯಾರಿಸಿತ್ತು ಎನ್ನುವುದು ಉಲ್ಲೇಖನೀಯ. ಅಂತಹ ಕಡೆ ಸೌಂಡ್ ಡಿಸೈನರ್‌ಗೆ ಸವಾಲುಗಳು ಹೆಚ್ಚಾಗಿರುತ್ತವೆ. ಲ್ಯಾಮ್ಸಿ 'ಟೆಸ್ಟ್' ನಲ್ಲಿ ಗೆದ್ದಿದ್ದಾನೆ. 'ಟೆಸ್ಟ್' ನಲ್ಲಿ ಸಂಭಾಷಣೆ ಇಲ್ಲ ಎನ್ನುವುದನ್ನು ಚಿತ್ರ ನೋಡಿ ಮುಗಿಸಿದ ಮೇಲೆ ಅದರ ಗುಂಗಿನಲ್ಲಿ ಯೋಚಿಸುವಾಗಷ್ಟೇ ಹೊಳೆಯುವುದು ಇದರ ವೈಶಿಷ್ಟ್ಯ.

ನಿರ್ದೇಶಕ ಅಲೆಕ್ಸಾಂಡರ್ ಕೋಟ್ ಒಂದು ಸಂದರ್ಶನದಲ್ಲಿ ಹೇಳುತ್ತಾನೆ:

'ನೀವೆಂದಾದರೂ ನಿಮಗೆ ತೀರ ಆಪ್ತರಾಗಿದ್ದವರ ಬಳಿ ಸಂಭಾಷಿಸುವಾಗ ಮಾತುಗಳ ಅವಶ್ಯಕತೆಯೇ ಇಲ್ಲ ಎನ್ನುವುದನ್ನು ಗಮನಿಸಿದ್ದೀರಾ? ಬರಿಯ ಕಣ್ಣಿನ ಒಂದು ನೋಟದಿಂದ, ಒಂದು ಸನ್ನೆಯಿಂದ, ಒಂದು ಕಾರ್ಯದಿಂದ ಸಂವಹನ ಮಾಡಬಹುದಲ್ಲವೇ? ಕೆಲವೊಮ್ಮೆ ಟೊಳ್ಳು ಮಾತುಗಳಿಗಿಂತ ಮೌನವೇ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. 'ಟೆಸ್ಟ್' ಸಿನಿಮಾವನ್ನು ಮಾಡಿದ್ದು 'ನೋಡುವವರಿಗೆ'ಂದು! ಇಷ್ಟಕ್ಕೂ ಸಿನಿಮಾ ಹುಟ್ಟುವಾಗಲೇ ಮೂಕಿಯಾಗಿತ್ತಲ್ಲವೇ?'

ಅಲೆಕ್ಸಾಂಡರ್ ಕೋಟ್‌ನ 'ಟೆಸ್ಟ್' ಚಿತ್ರ ಕಳೆದ ವರ್ಷ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಸಮಾರೋಪ ಸಿನಿಮಾ ಆಗಿ ಪ್ರದರ್ಶನಗೊಂಡಿತ್ತು.

## ಗೋಪಾಲಕೃಷ್ಣ ಪೈ

ಕತೆಗಾರರಾಗಿ, ಕಾದಂಬರಿಕಾರರಾಗಿ, ಅನುವಾದಕರಾಗಿ ಗೋಪಾಲಕೃಷ್ಣ ಪೈ ಗುರುತಿಸಿಕೊಂಡಿದ್ದಾರೆ. ಕಾಸರಗೋಡಿನ ಪೆರ್ಲದವರಾದ ಅವರು ಈಗ ನೆಲೆಸಿರುವುದು ಬೆಂಗಳೂರಿನಲ್ಲಿ.

1966ರಂದಲೇ ಸಣ್ಣಕತೆಗಳನ್ನು ಬರೆಯಲು ಆರಂಭಿಸಿದರೂ ಅವರ ಮೊದಲ ಕಥಾ ಸಂಗ್ರಹ 'ತಿರುವು' ಪ್ರಕಟವಾಗಿದ್ದು 1985ರಲ್ಲಿ. ಬಳಿಕ 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಎಂಬ ಕಥಾ ಸಂಗ್ರಹಗಳು ಪ್ರಕಟಗೊಂಡವು. ಈ ಮೂರೂ ಸಂಗ್ರಹಗಳು ಸೇರಿದಂತೆ ೩೫ ಕತೆಗಳ ಸಂಗ್ರಹ 'ಮೂರು ಮತ್ತಿಷ್ಟು' 2010ರಲ್ಲಿ ಪ್ರಕಟವಾಗಿದೆ. ಅವರ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳು. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ.